ಕಡೆಯ ಉಪಾಯವೆಂಬಂತೆ ಭರಭರ ಕಂಪೌಂಡಿನ ಹೊರಬಂದು ನಳಿನಿಗೆ ಫೋನು ಹಚ್ಚಿ ಒಂದೇ ಉಸಿರಲ್ಲಿ ಆದುದೆಲ್ಲ ಹೇಳಿದರೆ ಅವಳು, "ಭಾಳ ಛಲೋ ಆತು. ಹೋದ ಸಲ ಹೋದಾಗನೇ ನಾ ಮಾಮಾಗ ಹೇಳಿ ಬಂದಿದ್ದೆ, 'ಒಬ್ಬರೇ ಕೈಬಾಯಿ ಸುಟಗೊಂಡಿದ್ದು ಸಾಕು, ಇಲ್ಲೇ ಬಂದು ಬಿಡ್ರಿ ಅಂತ'' ಅಂದುಬಿಟ್ಟಳು. ರಮೇಶ ಒಮ್ಮೆಲೆ ಹೊತ್ತಿ ಉರಿದವನಂತೆ, "ನನಗ್ಯಾಕ ಹೇಳಲಿಲ್ಲ ಮುಂಚೇ ನೀ ಇದೆಲ್ಲಾ?" ಅಂತ ಕಿರುಚಿದ. "ಅದರಾಗ ಹೇಳುವಂಥಾದ್ದೇನದ?" ಅಂತ ಅವಳು ತೀರ ಸಹಜವಾಗಿ ಅಂದಾಗ ಏನು ಮಾತಾಡಲೂ ಹೊಳೆಯದೆ ಫೋನಿಟ್ಟು ಬಿಟ್ಟ.

ಬಾಗಲಕೋಟೆ – ಮುಂಬೈ ಎಕ್ಸ್‌ಪ್ರೆಸ್ ಬಸ್ಸು ಮುಂಬೈ ತಲುಪಿದಾಗ ಸಂಜೆ ಏಳರ ಮೇಲಾಗಿತ್ತು. ಟ್ಯಾಕ್ಸಿಯಲ್ಲೇ ಮುಲುಂದಕ್ಕೆ ಬಂದು ಮನೆಯ ಮುಂದೆ ಇಳಿದಾಗ, ನಳಿನಿ ಓಡಿ ಬಂದು ಅಪ್ಪನ ಕಾಲು ಮುಟ್ಟಿ ನಮಸ್ಕರಿಸಿದಳು. 'ತಾ ಅವರಿಗೆ ನಮಸ್ಕಾರ ಮಾಡದೆ ಎಷ್ಟು ವರ್ಷಗಳಾದವು?' ಅಂತ ರಮೇಶ ಯೋಚಿಸುತ್ತಲೇ ಒಂದೊಂದೇ ಬ್ಯಾಗೆತ್ತಿ ಲಿಫ್ಟಿನಲ್ಲಿಟ್ಟ. ಮುಂಚೆಯೇ ಬಿಸಿನೀರು ಕಾಯಿಸಿ, ಅನ್ನ ಸಾರು ಮಾಡಿ ರಾಹುಲನ ಕೋಣೆಯಲ್ಲಿಯೇ ಹಾಸಿಗೆಯನ್ನೂ ಹಾಸಿಟ್ಟಿದ್ದಳವಳು. ನಾಲ್ಕು ಚೊಂಬು ನೀರು ತಲೆಗೆ ಸುರಕೊಂಡು ಎರಡು ತುತ್ತು ಉಂಡವರೇ, "ನಾ ಭಾಳ ದಣದೇನಪ್ಪಾ ನಾಳೆ ಮಾತಾಡೂಣು" ಅಂತ ರಾಮರಾಯರು ಮುಸುಕೆಳೆದು ಮಲಗಿಬಿಟ್ಟರು. ಅವರು ರಾಹುಲನನ್ನು ಮಾತಾಡಿಸಲಿಲ್ಲ ಅನ್ನೋದು ನಳಿನಿಯ ಲಕ್ಷ್ಯಕ್ಕೆ ಬರುವಂತೆ ಬೇಕಂತಲೇ ಮಗನನ್ನು ಬಾಚಿ ತಬ್ಬಿಕೊಂಡು, "ಏನು ಮಾಡಿದ್ಯೋ ಕಂದಾ ಎರಡು ದಿನ?" ಅಂತ ರಮೇಶ ಅಚ್ಚಾ ಮಾಡಲು ಹೋದರೆ ಅಪ್ಪನ ಇಂಥಾ ವರ್ತನೆ ರೂಢಿಯಿಲ್ಲದ ರಾಹುಲ ಕೊಸರಿಕೊಂಡು ಮೈ ಕೈ ತಿರುಚಿ 'ಅಮ್ಮಾ' ಅಂತ ಒದರುತ್ತ ಅಳತೊಡಗಿದ. ನಳಿನಿ, "ಅಜ್ಜಾ ಮಲಗ್ಯಾರ ಪುಟ್ಟಾ ಅಳಬಾರ್ದು" ಎನ್ನುತ್ತಾ ಅವನನ್ನೆತ್ತಿಕೊಂಡು ಮುದ್ದಿಸುತ್ತಾ ಒಳಹೋದಳು.

ಒಂದೆರಡು ದಿನ ಅವರು ತಮ್ಮ ಚೀಲದಿಂದ ಸಾಮಾನು ತೆಗೆದಿಟ್ಟುಕೊಳ್ಳುವುದು ನಡುನಡುವೆ ಧ್ವನಿ ತಗ್ಗಿಸಿ ಸಣ್ಣಗೆ ನಳಿನಿಯನ್ನು, "ಕೊಬ್ಬರಿ ಎಣ್ಣಿ ಎಲ್ಲ್ಯದ? ನಾ ಅರಿವಿ ಎಲ್ಲಿಟ್ಟುಕೊಳ್ಳಲಿ?" ಅಂತ ಕೇಳೋದು ಇಂಥವೆಲ್ಲ ಆದವು. ಮೇ ತಿಂಗಳಾದ್ದರಿಂದ ಮಧ್ಯಾಹ್ನವಿಡೀ ಕಾಯುತ್ತಿದ್ದ ತಾರಸಿ, ಗೋಡೆಗಳು ಸಂಜೆಯ ಹೊತ್ತಿಗೆಂದರೆ ಬಿಸಿ ಹೆಂಚಾಗಿರುತ್ತಿದ್ದವು. ಮನೆಯೆಲ್ಲ ಮಾವಿನಕಾಯಿ ಅಡಿಗ್ಹಾಕಿದಂತೆ ಬೆಚ್ಚಗೆ. ಒಂದೆರಡು ದಿನ, "ಥೋ ಥೋ ಎಂಥಾ ಶೆಕೀ ಮಹರಾಯಾ ಈ ಮುಂಬೈ" ಅಂದವರು ಅನಂತರ ತಡಕೊಳ್ಳಲಾಗದವರಂತೆ, "ಮನಿಗೆ ಎ.ಸಿ. ಹಾಕಸಬಾರದೇನೋ ರಮೇಶಾ?" ಅಂತ ಕೇಳಿದರು. ಇವ ತಟ್ಟನೆ, "ಬ್ಯಾಂಕಿನಾಗ ಕ್ಲರ್ಕ್ ಇದ್ದೇನಿ ಅಪ್ಪಾ ನಾ. ದೊಡ್ಡ ಇಂಜಿನಿಯರಿಲ್ಲ, ಅಲ್ಲದನs ಬಾಗಲಕೋಟ್ಯಾಗ ಎಷ್ಟು ಎ.ಸಿ. ಅವ ಅಂತ ಇಲ್ಲಿ ಕೇಳ್ಳಿಕತ್ತೀರಿ?" ಅಂದುಬಿಟ್ಟ. ಬಾಲ್ಕನಿಯಲ್ಲಿ ಒಣಗಿದ ಬಟ್ಟೆ ಮಡಚಿಡುತ್ತಿದ್ದ ನಳಿನಿಗೆ ಇವನ ಮಾತು ಕೇಳಿರದಿದ್ದರೂ ಕೆಂಪಡರುತ್ತಿದ್ದ ಇವನದ್ದೇ ಮುಖ ಕಂಡಿರಬೇಕು, ಲಗುಬಗೆಯಿಂದ ಒಳ ಬಂದಳು, ಅಪ್ಪ ಎದ್ದು ಒಳಹೋದರು.

''ಏನಾತು?''

''ಏನಿಲ್ಲ.''

''ಏನಿಲ್ಲೇನು? ಕನ್ನಡಿ ನೋಡಿಕೋರಿ. ಹಣಿ ಮ್ಯಾಲ ನರ ಎದ್ದು ಕುಣೀಲಿಕತ್ತದ, ಥರಥರ ನಡಗಲಿಕತ್ತೀರಿ. ಅಂಥಾದ್ದೇನಾತು?''

ರಮೇಶ ಮಾತಾಡದೆ ಕೋಣೆಗೆ ಹೋಗಿ ರಪ್ಪೆಂದು ಬಾಗಿಲು ಹಾಕಿಕೊಂಡ.

'ಕಾಂಕ್ರೀಟಿನ ಸೀಳಲ್ಲೂ ಬೆಳೆಯುತ್ತದೆ ಸಸಿ. ಎಲ್ಲಿಂದಲೋ ನೀರ ಪಸೆ ಹಿಡಿದುಕೊಳ್ಳುತ್ತಾ, ಬೇರು ಬಿಡುತ್ತಾ ಗಟ್ಟಿ ನಿಲ್ಲಲು ಹೆಣಗಾಡುತ್ತದೆ. ಆದರದೆಷ್ಟು ಬೆಳೆದೀತು? ಅಷ್ಟೇ ಜೀವಂತವಾಗಿರುವಷ್ಟು;